**PRATIBIMBA – Multidisciplinary Kannada Research Journal of IIMRD**
**ISSN: 2582-2284**
**Vol-2 Issue 1, Jul-Aug 2020, 127-132**
**©*IIMRD*, Mysuru**
**www.iimrd.com**

# ದಲಿತ–ಬಂಡಾಯ ಕಾವ್ಯಗಳಲ್ಲಿ ಸಮಾಜವಾದದ ಚರ್ಚೆ

**ಡಾ. ಎಂ. ನಂಜುಂಡಸ್ವಾಮಿ[1]**

**ಪೀಠಿಕೆ**

ಯಾವುದೇ ಸಾಹಿತ್ಯ ರಚನೆಯ ಮೂಲ ಉದ್ದೇಶ ಸಮಾಜದೊಂದಿಗೆ ಸ್ಪಂದಿಸುವುದೇ ಆಗಿದೆ. ಪ್ರತಿಯೊಬ್ಬ ಕವಿಯು ಸಮಾಜವೊಂದರ ಅಂಗವಾಗಿ ಬೆಳೆಯುವುದರಿಂದ, ಅವನ ವ್ಯಕ್ತಿತ್ವದ ರಚನೆಯಲ್ಲಿ, ದೃಷ್ಟಿಕೋನದ ಬಣ್ಣಗಳಲ್ಲಿ, ಭಾವನೆಗಳ ಸಂಘರ್ಷದಲ್ಲಿ, ಬೌದ್ಧಿಕ ಸ್ವರೂಪದಲ್ಲಿ ಹಾಗೂ ಸಂಹವನದಲ್ಲಿ ಸಾಮಾಜಿಕ ಪರಿಸರದ ಪ್ರಭಾವಗಳು ವ್ಯಕ್ತವಾಗಿಯೋ; ಅವ್ಯಕ್ತವಾಗಿಯೋ, ಅನಿವಾರ್ಯವಾಗಿ ಸೇರಿಕೊಂಡಿರುತ್ತವೆ. ಆದರೆ ಈ ಪ್ರಭಾವಗಳು ಕವಿಯ ಸಂವೇದನೆಯನ್ನು ಆಳದಲ್ಲಿ ಪ್ರಭಾವಿಸುವುದರಿಂದ, ಅವನ ಒಟ್ಟು ಸಂವೇದನೆಯ ದ್ರವ್ಯದಲ್ಲೆ ಕರಗಿರುವುದರಿಂದ, ಅವುಗಳನ್ನು ವಿಭಜಿಸಿ ತೋರಿಸುವುದು ಕಠಿಣವಾದ ಕೆಲಸ. ಆದರೆ ಕ್ಷಣ ಕ್ಷಣಕ್ಕೂ ಬದಲಾಗುತ್ತಿರುವ ಈ ಸಾಮಾಜಿಕ ಪರಿಸರದಲ್ಲಿ ಒಬ್ಬ ಕವಿ ಎಷ್ಟರ ಮಟ್ಟಿಗೆ ತನ್ನ ಸಾಮಾಜಿಕ ಸಂವೇದನೆಯನ್ನು ಶ್ರೀಮಂತವಾಗಿಟ್ಟುಕೊಂಡು ಅವುಗಳಲ್ಲಿ ಸ್ಪಂದಿಸುತ್ತಾನೆ ಎಂಬುದು ಪ್ರಸ್ತುತ.

“ಸಾಹಿತ್ಯದ ಮೂಲ ಉದ್ದೇಶ ಸಮಾಜದೊಂದಿಗೆ ಸ್ಪಂದಿಸುವುದಾಗಿದ್ದರೂ, ಸಮಾಜವನ್ನು ಸ್ಪಂದಿಸುವ ಮಾರ್ಗ ಬೇರೆ ಬೇರೆ. ಆದರೆ ಅರ್ಥೈಸುವುದು ಒಂದೇ ಆಗಿದೆ. ಈ ಹಿನ್ನೆಲೆಯಲ್ಲಿ ಕಾವ್ಯ ಸೃಷ್ಟಿಯಲ್ಲಿ ಕವಿ ಪ್ರತಿಭೆಯ ಕ್ರಿಯೆ ಮುಖ್ಯ. ಇದು ಕವಿಯ ಬದುಕಿನ ವಾತಾವರಣ, ಕಾಲಮಾನಕ್ಕೆ ಅನುಗುಣವಾಗಿ ಸಾಮಾಜಿಕ ಸಂದರ್ಭಗಳು ಕೃತಿಯಲ್ಲಿ ಪ್ರತಿಬಿಂಬಿತವಾಗಿರುತ್ತವೆ. ಪ್ರತಿಯೊಂದು ಕಾಲಘಟ್ಟದಲ್ಲಿಯೂ ಸಾಹಿತ್ಯ ಸೃಷ್ಟಿಯಲ್ಲಿ ಭಿನ್ನತೆಯನ್ನು ಕಾಣಬಹುದು. ಅಂದ ಮಾತ್ರಕ್ಕೆ ಇಡೀ ಸಾಹಿತ್ಯದ ಉದ್ದೇಶ ಭಿನ್ನವಲ್ಲ. ಆದರೆ, ಸಾಮಾಜಿಕ ಸನ್ನಿವೇಶಗಳನ್ನು, ವಾತಾವರಣವನ್ನು ಕಟ್ಟಿಕೊಡುವಲ್ಲಿ ಬೇರೆ ಬೇರೆ ಯಾಗಿರುವುದನ್ನು ಕಾಣಬಹುದು. ಪಂಪನ ಕಾಲದ ಸಾಮಾಜಿಕ ಸಂದರ್ಭ ಮತ್ತು ಇಂದಿನ ದಲಿತ ಬಂಡಾಯದ ಸಾಮಾಜಿಕ ಸಂದರ್ಭ ಎರಡರಲ್ಲೂ ವ್ಯತ್ಯಾಸವನ್ನು ಕಾಣಬಹುದು. ರಾಜಪ್ರಭುತ್ವ ಹೋಗಿ ಪ್ರಜಾಪ್ರಭುತ್ವ ಬಂದಿದ್ದು, ಆ ಕಾಲದ ಜನ ಸಾಮಾನ್ಯರ ಬದುಕಿಗೂ ಇಂದಿನ ಜನ ಸಾಮಾನ್ಯರ ಬದುಕಿಗೂ ಅಜಗಜಾಂತರ ವ್ಯತ್ಯಾಸವನ್ನು ಕಾಣಬಹುದು. ಅಂದರೆ, ಸಾಮಾಜಿಕ ಕಟ್ಟಳೆಗಳಲ್ಲಿ, ಆಚಾರ–ವಿಚಾರಗಳಲ್ಲಿ ಸಾಕಷ್ಟು ಬದಲಾವಣೆಯನ್ನು ಕಾಣಬಹುದು. ಸಮಾಜದಲ್ಲಿಯೂ ಸಮಗ್ರ ಅಭಿವೃದ್ಧಿಯನ್ನು ಕಾಣಲಾಗದಿದ್ದರೂ, ಅಭಿವೃದ್ಧಿ ಆಗಿರುವುದಂತೂ ದಿಟ. ಇಂತಹ ಸಾಮಾಜಿಕ ಬದಲಾವಣೆ ಚರ್ಚೆಯನ್ನು ಬಂಡಾಯ ಸಾಹಿತ್ಯದ ಸಾಹಿತಿಗಳು, ಕವಿಗಳು ಹೇಗೆ ಪ್ರಸ್ತಾಪಿಸಿದ್ದಾರೆಂಬುದೇ ಮುಖ್ಯ.

[1] *ಸಹಾಯಕ ಕನ್ನಡ ಪ್ರಾಧ್ಯಾಪಕ, ಬಸವೇಶ್ವರ ವಾಣಿಜ್ಯ ಮಹಾವಿದ್ಯಾಲಯ, ಬಾಗಲಕೋಟ–587101.*

ಬಂಡಾಯ ಕಾವ್ಯದ ಸಾಮಾಜಿಕ, ಆರ್ಥಿಕ, ಧಾರ್ಮಿಕ, ರಾಜಕೀಯ ಚಿಂತನೆಯಲ್ಲಿ ಮೇಲು–ಕೀಳು, ಉಚ್ಛ–ನೀಚ, ಬಡತನ, ನಿರುದ್ಯೋಗ ಮತ್ತು ಅಸ್ಪೃಶ್ಯತೆ ಇವುಗಳನ್ನು ಗಂಭೀರವಾಗಿ ಪರಿಗಣಿಸಬಹುದಾಗಿದೆ. ಶ್ರೀಮಂತವರ್ಗ ಬಡವರನ್ನು, ದೀನ–ದಲಿತರನ್ನು, ತಮ್ಮ ಮನೆಗಳಲ್ಲಿ ಜೀತಕ್ಕಿಟ್ಟುಕೊಂಡು, ಅವರ ಬಡತನವನ್ನೇ ಬಂಡವಾಳವನ್ನಾಗಿ ಮಾಡಿಕೊಂಡು ತುಳಿಯುತ್ತಾ ಬಂದಿರುವುದನ್ನು ಕಾಣಬಹುದು. ತುಳಿತಕ್ಕೆ ಒಳಪಟ್ಟವರ ನೋವು, ಸಹನೆ, ಸಿಟ್ಟು, ಆಕ್ರೋಶ, ಹಸಿವು ಇವೆಲ್ಲವನ್ನು ಬಂಡಾಯ ಕವಿ–ಕಾವ್ಯ ಕಾಣ ಬಯಸಿದ ರೀತಿಯನ್ನು ದಾಖಲಿಸಬೇಕಾಗಿದೆ. ಸಮಾಜದಲ್ಲಿ ಮೇಲು–ಕೀಳು, ಬಡವ–ಶ್ರೀಮಂತ, ಕಲ್ಪನೆಗಳು ಮಾನವನ ಬದುಕಿನಲ್ಲಿ ಅತ್ಯಂತ ಘೋರವಾದ ದುರಂತಗಳನ್ನು ನಿರ್ಮಿಸುತ್ತಿವೆ. ಅದರಲ್ಲೂ ಬಡತನ ಮತ್ತು ಅಸ್ಪೃಶ್ಯತೆ ಒಟ್ಟಿಗಿದ್ದಾಗ ಮೇಲ್ವರ್ಗದವರಿಂದ ತಿರಸ್ಕೃತವಾಗಿ ಹೀನಾಯವಾಗಿ ಬಾಳಬೇಕಾಗುತ್ತದೆ.

***ತಿಪ್ಪೆ ತಿಪ್ಪೆ ತಿರುಗಲಾರೆ***
***ಹಾಲ ಮೊಸರು ಬೇಡಲಾರೆ***
***ಹುಳ್ಳಾ ನುಚ್ಚು ಕೊಡುವೆಯಾದರೆ***
***ಕುಡಿದು ಮಾತು ಕೇಳುವೆ*** [1]

ಹಸವಿನಿಂದ ಬಳಲುತ್ತಿದ್ದ ಮಗುವೊಂದು ತನ್ನ ತಾಯಿಯ ಬಳಿ ಬಂದು, ನನಗೆ ಬೇಕಿರುವುದು ಹಾಲು, ಮೊಸರಲ್ಲ, ಹುರಳಿ ನುಚ್ಚು, ಬಡವರ ಆಹಾರವಾದ ಹುರಳಿ, ಅದರ ನುಚ್ಚು. ಶ್ರೀಮಂತರಲ್ಲಿ ದನಗಳ ಆಹಾರವಾಗಿದೆ. ಯುವ ಪೀಳಿಗೆಯ ಪ್ರತಿನಿಧಿಯಾಗಿ ಬಂದಿರುವ 'ಮಗು' ಕವನದಲ್ಲಿ ಮುಗ್ಧ, ಅಸಹಾಯಕತೆ, ಶ್ರೀಮಂತಿಕೆಯ ದರ್ಪದಲ್ಲಿ ಬೇಸತ್ತ ಈ ಎಲ್ಲಾ ಅರ್ಥಗಳಿಗೆ ಸಾಕ್ಷಿಯಾಗಿದೆ.

***ತುತ್ತು ಕೂಳಿಗಾಗಿ ಸತ್ತ ದನಿಯವರೆ***
***ತುಂಡು ಅರಿವೆಗಾಗಿ ಬತ್ತಿ ಹೋದವರೆ***
***ಓ ಕಪ್ಪು ಮನುಜರೆ, ಬಂಧು ಬಾಂಧವರೆ***
***ಎಲ್ಲಿ ನಿಮ್ಮ ದನಿ, ಎಲ್ಲಿ ನಿಮ್ಮ ಸ್ವರ***
***ಕರಿಯೊಡಲ ಕೆಂಪುಸಿರು ಎಲ್ಲಿ?*** [2]

ಸಾಮಾಜಿಕವಾಗಿ ದುರ್ಬಲರಾದವರು ತಮ್ಮಗಳ ನೋವು, ಅಸಹನೆ, ಸಿಟ್ಟು, ಆಕ್ರೋಶ ಅಸನೆಗಳಿಗೆ ಬಲಿಯಾಗಿ ಕೆಲ ಹೊತ್ತಾದರೂ ಸಂಕಷ್ಟಗಳನ್ನು ಮರೆಯಲು ಪ್ರಯತ್ನಿಸುವುದು ಒಂದೆಡೆಯಾದರೆ, ದುಡಿತದ ಬಹುಪಾಲನ್ನು ಕುಡಿತಕ್ಕೆ ಚೆಲ್ಲಿ ಜೀವನವನ್ನು ಹಸಿವಿನಿಂದ ಕಳೆಯುತ್ತಿರುವುದು ಮತ್ತೊಂದು ವಿಪರ್ಯಾಸ.

ಇಲ್ಲಿ ಕವಿ ದಲಿತರ ಪರವಾಗಿ ಧ್ವನಿಯೆತ್ತಿ, ಅವರೆದೆಯಲ್ಲಿ ಅಡಗಿರುವ ಬೆಂಕಿಗೆ ಜ್ವಾಲೆಯಾಗಿ ಸುಡುವ ದ್ಯೋತವಾಗಿ ದಿನ–ದಲಿತರನ್ನು ಪ್ರಶ್ನಿಸಿದ್ದಾರೆ. ಸಾಮಾಜಿಕವಾಗಿ ಅನ್ಯಾಯಕ್ಕೆ ಸಿಲುಕಿರುವ ಈ ವರ್ಗ ಅನ್ಯಾಯದ ವಿರುದ್ಧ ಹೋರಾಡುವುದರಿಲಿ, ಧ್ವನಿಯನ್ನು ಸಹ ಎತ್ತುವುದಿಲ್ಲ. ಇಂತವರ ಬದುಕಿನ ಪರವಾಗಿ ಧ್ವನಿಯೆತ್ತುತ್ತಾ, ಸಿಡಿದೇಳಿ ಎಂದು ಎಚ್ಚರಿಸುತ್ತಾರೆ.

ಇಂದಿನ ಆಧುನಿಕ ಯುಗ ಸಂಕುಚಿತಗೊಳ್ಳುತ್ತಿದೆ. ಅದರೊಂದಿಗೆ ಸಾಮಾಜಿಕ ಶೋಷಣೆಯೂ ಉಲ್ಬಣಗೊಳ್ಳುತ್ತಿದೆ. ಇಂತಹ ಸಾಮಾಜಿಕ ಶೋಷಣೆಯನ್ನು ತಮ್ಮ ಮನೋಸಂವೇದನೆಗೆ ಸಿಲುಕಿಸಿಕೊಂಡು

ಕಾವ್ಯದ ಮೂಲಕ ಅಭಿವ್ಯಕ್ತಿಸುವ ತಂತ್ರವನ್ನು ನಮ್ಮ ಹಿಂದಿನ ಕವಿಗಳು ರೂಢಿಸಿಕೊಂಡು ಬಂದಿದ್ದಾರೆ. ಜೊತೆಗೆ ಕವಿಯೊಬ್ಬನ ಮಾನಸಿಕ ತವಕದ ಹಿಂದೆ ಜನ–ಜೀವನದ ತುಡಿತವಿದೆ ಎನ್ನುವುದನ್ನು ಮರೆಯಲಾಗುವುದಿಲ್ಲ.

ಸಾಮಾಜಿಕ ಸಮಸ್ಯೆಗಳನ್ನು ಕುರಿತು ಮಾತನಾಡುವಾಗ ಕೇವಲ ಮಾನವನಿಂದ ನಿರ್ಮಿತವಾಗಿರುವ ಸಂದರ್ಭಗಳಲ್ಲಿ ಮಾನವನ ಮಾನಸಿಕ ನೆಲೆಯೂ ಒಂದು ಸಾಮಾಜಿಕ ನೆಲೆಯಾಗಿ ರೂಪಗೊಳ್ಳುತ್ತದೆ.

***ಹೊಗೆಯುಟ್ಟ ಒಡಲಿಗೆ ಹೋಳಿಗೆಯ ಸವಿ***
***ಚಟ್ಟೆನ್ನುವ ಪಟ್ಟೆನ್ನುವ ಪಟಾಕಿಯಲ್ಲ***
***ಸದ್ದು ಗದ್ದಲವಿಲ್ಲ*** [3]

ಸಾಮಾಜಿಕ ಸತ್ಯ ಮತ್ತು ವಸ್ತುನಿಷ್ಠ ಸತ್ಯದ ಹಿನ್ನಲೆಯಲ್ಲಿ ಮೇಲಿನ ಸಾಲುಗಳು ಹೆಚ್ಚು ಅರ್ಥಗರ್ಭಿತವಾಗುತ್ತವೆ. ಹಬ್ಬ–ಹರಿದಿನಗಳು ಸಮಾಜದಲ್ಲಿ ಸಾಮಾಜಿಕ ಸಾಂಸ್ಕೃತಿಕ ನೆಲೆಯ ಸತ್ಯವಾದರೆ, ಬಡತನ ಅದರೊಳಗಿನ ಒಡಲಾಗ್ನಿಯ ವಸ್ತುನಿಷ್ಠ ಸತ್ಯವಾಗಿದೆ. ಸಮಾಜದಲ್ಲಿ ವರ್ಗ ಮತ್ತು ವರ್ಣ ವ್ಯವಸ್ಥೆಯ ಅಸಮಾನತೆಯ ಬೆಂಕಿ ಹೊಗೆಯಾಗಿ ಒಳಗೇ ದಹಿಸುತ್ತಿರುವಾಗ ಹಬ್ಬ–ಹರಿದಿನಗಳು ಸಂಭ್ರಮ ಸಂತೋಷ ತರಲಾರವು. ಸುಂದರ ಮನಸ್ಸುಗಳು ಸುಟ್ಟು ಕರಕಲಾಗಿ ಹೆಣವಾಗಿ ಬಿದ್ದಿವೆ. ನಿಸ್ತೇಜವಾದ ಮನಸ್ಸುಗಳಿಗೆ ಬಂಡಾಯ–ದಲಿತ ಸಾಹಿತ್ಯ ಮತ್ತು ಚಳುವಳಿ ಉಸಿರಾಡಲು ಶಕ್ತಿಯಾಗಿದೆ.

ಸಾಮಾಜಿಕ ನೆಲೆಯಲ್ಲಿ ಬದುಕುವ ಮಾನವನಿಗೆ ಅವನ ಬದುಕಿನ ಪರಿಮಿತಿಯಲ್ಲಿಯೇ ವಿಶಿಷ್ಟವಾದ ಜವಾಬ್ದಾರಿಗಳಿರುತ್ತವೆ. ಈ ಹೊಣೆಗಾರಿಕೆಯನ್ನು ಸಮರ್ಥವಾಗಿ ನಿಭಾಯಿಸಿದಾಗ ಮಾತ್ರ ಆ ವ್ಯಕ್ತಿ ಸಮಾಜದ ಆಗು–ಹೋಗುಗಳ ಬಗ್ಗೆ ಅರಿವನ್ನು ಪಡೆಯುತ್ತಾನೆ. ಈ ನಿಟ್ಟಿನಲ್ಲಿ ದಲಿತ ಬಂಡಾಯ ಕವಿಗಳು ತಮ್ಮ ಸಮಾಜವಾದದ ಚರ್ಚೆಯಲ್ಲಿ, ವಸ್ತುನಿಷ್ಠ ಪ್ರಜ್ಞೆಯನ್ನು ಮೂಡಿಸಿರುವುದರಲ್ಲಿ ಸಂದೇಹವೇ ಇಲ್ಲ. ಭಾರತೀಯ ಸಾಂಸ್ಕೃತಿಕ ಮತ್ತು ಧಾರ್ಮಿಕ ವಲಯದಲ್ಲಿ ಬೇರೆಲ್ಲಾ ದೇಶಗಳ ಸಾಂಸ್ಕೃತಿಕ ವಲಯದಿಂದ ಭಿನ್ನವಾಗಿದ್ದು, ಹಲವಾರು ಧರ್ಮಗಳ ತವರೂರಾಗಿ, ಹಲವಾರು ಭಾಷೆಗಳ ಆವಾಸ್ಥಾನವಾಗಿದೆ. ದೇವರು ಧರ್ಮ, ನಂಬಿಕೆ, ಆಚಾರ–ವಿಚಾರ, ನಿಷ್ಠೆ–ನಿಯಮಗಳು ವ್ಯಕ್ತಿಯನ್ನು ಸಮಾಜದ್ರೋಹಿ ಕೃತ್ಯ ಎಸಗದಂತೆ ತಡೆಹಿಡಿದಿವೆ. ಇದರೊಂದಿಗೆ ಕೆಲವೊಂದು ವ್ಯಕ್ತಿಗಳ ಸ್ವತಂತ್ರ ಹರಣವು ನಡೆದಿದೆ. ಇದರಿಂದಾಗಿ ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಕುಬ್ಜನಾಗುತ್ತಾ ಹೋಗಿದ್ದಾರೆ. ಧರ್ಮ ಮತ್ತು ಧಾರ್ಮಿಕ ಆಚರಣೆಗಳು ಶೂದ್ರಾತಿಶೂದ್ರರನ್ನು, ಅಸ್ಪೃಶ್ಯರನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡೇ ದೂರವಿರಿಸಿರುವುದನ್ನು ಕಾಣಬಹುದು.

***ವಿವಿಧ ರಂಗಿನ ಮುಖವಾಡ ಧರಿಸಿ***
***ಶತ–ಮತಗೊಂಡು ಶತ–ಪಥಗಳಲಿ ಕುಣಿಯುವರ***
***ಬಹುರೂಪಿ ಶಬ್ದಗಳು*** [4]

ವರ್ಣಾಶ್ರಮ ಧರ್ಮದ ಹಿನ್ನೆಲೆಯಲ್ಲಿ ದಲಿತರನ್ನು ದಡ್ಡರನ್ನಾಗಿ ಮಾಡಿದ್ದರ ಬಗ್ಗೆ ಅರಿವಿದೆ. ವರ್ಣವ್ಯವಸ್ಥೆ ವಿಭಜಿಸಿ ನೋಡುವ ಮನೋಭಾವವನ್ನು ಬೆಳೆಸಿಕೊಂಡಿರುವ ವಿಧಾನದ ಬಗ್ಗೆ

ಆಕ್ರೋಶವಿದೆ. ಧರ್ಮ ಬಡವರ ಬದುಕಿನ ಅಸಹಾಯಕತೆಯನ್ನು ವಸ್ತುವಾಗಿ ಮಾಡಿಕೊಂಡು ಶೋಷಿಸುವ ವಿಧಾನವಿದೆ.

ಜಾತಿವಾದಗಳೂ, ಪುರೋಹಿತ ಶಾಹಿಗಳು, ಅಧಿಕಾರಶಾಹಿಗಳು ಈ ದೇಶದಲ್ಲಿ ಕ್ರೂರ ವಾತಾವರಣವನ್ನು ನಿರ್ಮಿಸಿದ್ದಾರೆ. ಇಲ್ಲಿ ಅವರ ಸಂಸ್ಕೃತಿ ಕೊಳೆತು ನಾರುತ್ತಿದ್ದರೂ ಅದೇ ಶ್ರೇಷ್ಠವೆಂದು ವಾದಿಸುತ್ತಾರೆ. ಇಂಥ ಪರಿಸರದಲ್ಲಿ ಜನ ಸಾಮಾನ್ಯರು ತಮ್ಮ ವ್ಯಕ್ತಿತ್ವವನ್ನು ಕಳೆದುಕೊಂಡು ಅಪಮಾನಿತ ಬದುಕಿನಲ್ಲಿ ಬದುಕುತ್ತಿದ್ದಾರೆ. ಇಂತಹ ಬದುಕನ್ನು ಅನೇಕ ಸಾಹಿತಿಗಳು ತಮ್ಮ ಸಾಹಿತ್ಯದಲ್ಲಿ ಚಿತ್ರಿಸಿದ್ದಾರೆ.

"ಜನ್ಮದಿಂದ ಅಸಮಾನತೆಯನ್ನು ಆಧಾರವಾಗಿಟ್ಟುಕೊಂಡು ಬಂದ ಹಿಂದೂ ಪರಂಪರೆ ನಿಸರ್ಗ ವಿರೋಧಿ, ಜೀವ ವಿರೊಧಿ ಹಾಗೂ ಮಾನವ ವಿರೋಧಿ ಮನುಷ್ಯ ಮನುಷ್ಯನನ್ನು ಮುಟ್ಟಿಸಿಕೊಳ್ಳಲಾಗದಂಥ ಇಂತ ಒಂದು ಬರ್ಬರ ಧರ್ಮ ಪರಂಪರೆ ಈ ಜಗತ್ತಿನಲ್ಲಿ ಎಲ್ಲೂ ಇಲ್ಲ ಎನ್ನುವ 'ಚಂಪಾ'ರವರ ಮಾತು ತುಂಬಾ ಅರ್ಥಪೂರ್ಣ ಹಾಗೂ ಮಹತ್ವದ್ದಾಗುತ್ತದೆ". [5]

***ಇಕ್ರಲಾ ವದೀರ್ಲಾ***
***ಈ ನನ್ನ ಮಕ್ಕಳ ಚರ್ಮ ಎಬ್ರಲಾ***
***ದೇವ್ರು ಒಬ್ನೆ ಅಂತಾರೆ***
***ಓಣಿಗೊಂದೊಂದು ತರಾ ಗುಡಿ ಕಟ್ಸವ್ರೆ***
***ಎಲ್ಲಾರು ದೇವ್ರು ಮಕ್ಳು ಅಂತಾರೆ***
***ಹೊಲೇರ್ನ ಕಂಡ್ರೆ ಹಾವ್ ಕಂಡಂಗಾಡ್ತಾರೆ***
***ಹೋಟ್ಲು, ಮನೆ, ಬಾವಿ, ಯಾವದ್ಕೂ ಸೇರ್ಸವಲ್ರೊ*** [6]

ದಲಿತ–ಬಂಡಾಯ ಸಾಹಿತ್ಯ ಸಂದರ್ಭದಲ್ಲಿ ಸಿದ್ಧಲಿಂಗಯ್ಯನವರು ತಮ್ಮ 'ಹೊಲೆ ಮಾದಿಗರ ಹಾಡು' ಕೃತಿಯಲ್ಲಿ ಮೇಲ್ವರ್ಗದವರು ದಲಿತರನ್ನು ಶೋಷಿಸಿಕೊಂಡು ಬಂದಿರುವುದನ್ನು ಕುರಿತು ಸಿಟ್ಟು, ಆಕ್ರೋಶ ವ್ಯಕ್ತಪಡಿಸುತ್ತಾರೆ. ದಲಿತರನ್ನು ಎಚ್ಚರಿಸುತ್ತಾರೆ. ಪುರೋಹಿತ, ವೈದಿಕಶಾಹಿಯ ಹುಳುಕುಗಳನ್ನು ಜಗತ್ತಿಗೆ ಸಾರಿ ಹೇಳಿದ್ದಾರೆ. ಧರ್ಮ ಬೇಧ ನೀತಿಯನ್ನು ಕುರಿತು ಟೀಕಿಸುತ್ತಾರೆ. ತಪ್ಪೆಸಗಿದವರ ಮುಖಕ್ಕೆ ರಾಚುತ್ತಾರೆ. ಆಡು ಭಾಷೆಯನ್ನು ಬಳಸಿಕೊಂಡು ಗ್ರಾಮೀಣ ಪರಿಸರದ ಸಾಂಸ್ಕೃತಿಕ ನೆಲೆಯನ್ನು ಕಟ್ಟಿಕೊಡುತ್ತಾರೆ."

"ಸಿದ್ದಲಿಂಗಯ್ಯನವರ ಇಪ್ಪತ್ತು ಕವನಗಳ ಮೊದಲ ಸಂಕಲನ ಕನ್ನಡದ ಬರವಣಿಗೆಗೆ ಅರ್ಥಪೂರ್ಣವಾದ ಹೊಸ ದಿಕ್ಕನ್ನು ತೋರಿಸಿಕೊಟ್ಟು ಸಾಂಸ್ಕೃತಿಕ ಮಹತ್ವವನ್ನು ಹೊಂದಿದೆ. ತನ್ನೆಲ್ಲಾ ನೋವು ಹಾಗೂ ಚಾರಿತ್ರಿಕವಾದ ದೀರ್ಘಕಾಲದ ಸುಲಿಗೆಯ ಪೂರ್ಣ ಕಥನವನ್ನು ಥಟ್ಟನೆ ವ್ಯವಸ್ಥೆಯ ಮುಖಕ್ಕೆ ಒಡ್ಡಿ ಹೇಳುವ ರೊಚ್ಚು ಮತ್ತು ಎದೆಗಾರಿಕೆಯ ಸಂಕೇತವಾಗಿ ಈ ಸಂಕಲನದ ಶೀರ್ಷಿಕೆಯೂ ಕಾಣಿಸಿಕೊಂಡಿದೆ. ಓದುವ ಕಣ್ಣು, ಕೇಳುವ ಕಿವಿ, ತಿಳಿಯುವ ಮನಸ್ಸುಗಳನ್ನು ಸಮುದಾಯದ ಮಟ್ಟದಲ್ಲಿ ದಟ್ಟವಾಗಿ ಸೆರೆ ಹಿಡಿಯಬಲ್ಲ ಇಲ್ಲಿನ ಅನೇಕ ಸಾಲುಗಳಿಗೆ ಅತ್ಯಪೂರ್ವವಾದ ಚೈತನ್ಯವಿದೆ. ನಾಡಿನಾದ್ಯಂತ ಚಿಂತನಶೀಲ ಸಾಹಿತ್ಯಭ್ಯಾಸಿಗಳೆಲ್ಲರ ಗಮನವನ್ನು ಸೆಳೆದ ಹೊಲೆ ಮಾದಿಗರ ಹಾಡು ಚಾರಿತ್ರಿಕವಾಗಿ ಕೂಡ ಕನ್ನಡ ಕಾವ್ಯ ಮಾರ್ಗದಲ್ಲಿ ಹೊಸ ಆಸೆ, ಭರವಸೆಗಳನ್ನು ಮೂಡಿಸಿದ ಮುಖ್ಯ ಕೃತಿಯಾಗಿದೆ" (ಮಾಧವ

ಪೆರಾಜೆ–ಸಿದ್ದಲಿಂಗಯ್ಯ ಪುಟ–9) ಈ ಮಾತುಗಳು ಬಂಡಾಯ ದಲಿತ ಸಾಹಿತ್ಯ ಸಂದರ್ಭದಲ್ಲಿ ಕಾವ್ಯದ ಮಹತ್ವವನ್ನು ಗುರ್ತಿಸುತ್ತವೆ.

*ದೇವರುಗಳ ಪೂಜೆಯ ಗುರುವರ್ಯರ ದಾಸ್ಯದಲಿ*
*ಇಹಲೋಕಕು ಪರಲೋಕಕು ಸೇತುವೆಯ ಕಟ್ಟಿ*
*'ಪರಮಾತ್ಮನ ಪರೆದೆಯಲಿ ಜೀವಾತ್ಮನ ಕಬಳಿಸುವ*
*ಕಡು ಜಾಣರ ಕೊಂದು ತಿಂದು ಅನ್ಯಾಯವ ಮೆಟ್ಟಿ* [7]

ಧಾರ್ಮಿಕ ನಂಬಿಕೆಗಳು, ಆಚರಣೆಗಳು, ಸಾಮಾನ್ಯರನ್ನು, ದೀನ–ದಲಿತರನ್ನು ವಂಚಿಸುತ್ತಿವೆ. ಬಡವರ ಮೇಲೆ, ಶ್ರೀಸಾಮಾನ್ಯನ ಮೇಲೆ, ಬಡಬಗ್ಗರ ಮೇಲೆ ಆಗುತ್ತಿರುವ ಶೋಷಣೆ, ಪ್ರಾಣ ಹಾನಿಗಳನ್ನು ಕಲಾತ್ಮಕವಾಗಿಯೇ ಚಿತ್ರಿಸುತ್ತಾ, ತನ್ನೆಲ್ಲಾ ಆಕ್ರೋಶವನ್ನು ವ್ಯಕ್ತಪಡಿಸಿದ್ದಾರೆ. "ರಾಜಕೀಯ ನಿರಂಕುಶಮತಿಗಳಿಂದ ಜನ ಸಾಮಾನ್ಯರ ಬದುಕು ದುರ್ಬರವಾಗುತ್ತಿದೆ. ಇದರಿಂದ ಮನಸ್ಸು–ಮನಸ್ಸುಗಳ ಮಧ್ಯೆ ಬಿರುಕುಬಿಟ್ಟಿದೆ.

*ಬಡಜನರ ಗುಡಿಸಲಿಗೆ ಬೆಂಕಿಯನು ಇಟ್ಟವರು*
*ರಾಜರಾದರು ದೆಹಲಿ ನಾಡಿನಲ್ಲಿ*
*ಎಳೆಯ ಮಕ್ಕಳ ಕೊರಳ ದನಿಕಿತ್ತು ನಕ್ಕವರು*
*ರಕ್ತವನು ಹಂಚಿದರು ಆನಂದಕೆ* [8]

ಬಡವರ ಬದುಕಿನ ಕಠೋರತೆಯಲ್ಲಿ ತಮ್ಮ ಸುಖವನ್ನು ಬಯಸುವ ರಾಜಕೀಯ ಧುರೀಣರ ಬಗ್ಗೆ ಆಕ್ರೋಶವನ್ನು ವ್ಯಕ್ತಪಡಿಸುತ್ತಾರೆ. ಅವರು ನಡೆಸುವ ಬರ್ಬರ ಕೃತ್ಯವನ್ನು ವಿರೋಧಿಸುತ್ತಾರೆ. ಆ ರಾಜಕೀಯ ಲಾಭಿಯನ್ನೂ ಬಯಲಿಗೆಳೆಯುವ ಸಿಟ್ಟನ್ನು ಹೊರ ಹಾಕುತ್ತಾರೆ.

*'ಚುನಾವಣೆಯ ಕಾಲದಲ್ಲಿ*
*ಹಣ ಹೆಂಡದ ಅಮಲಿನಲ್ಲಿ*
*ಜನತೆಯನ್ನು ಮೋಸಗೊಳಿಸಿ*
*ಗೆದ್ದ ಮೇಲೆ ಭಾರ ಹೊರೆಸಿ*
*ಆಕಾಶದಲ್ಲೇ ಹಾರಾಡುವ*
*ಚುನಾವಣಾ ವೀರರೇ'* [9]

ಚುನಾವಣೆಯ ಮೂಲಕ ಬಡವರನ್ನು, ಸಾಮಾನ್ಯ ಜನರನ್ನು ಕುಡಿತದ ಚಟಕ್ಕೆ ತಳ್ಳುವುದು ಒಂದು ಕಡೆಯಾದರೆ, ರಾಜಕಾರಣಿಗಳು ಒಡ್ಡುವ ಆಸೆ–ಆಮಿಷಗಳಿಗೆ ಬಲಿಯಾಗುವ ಜನ ಒಂದೆಡೆ. ಸಾಮಾನ್ಯರ ದೌರ್ಬಲ್ಯಗಳನ್ನು ಉಪಯೋಗಿಸಿಕೊಂಡು ತಮ್ಮ ಬೇಳೆ ಬೇಯಿಸಿಕೊಳ್ಳುವ ವರ್ಗವನ್ನು ಅವರ ಸಮಾಜ ಬಾಹಿರ ಕೃತ್ಯವನ್ನು ದಾಖಲಿಸುತ್ತಾರೆ. ತಮ್ಮ ಹಿತಾಸಕ್ತಿಗಾಗಿ ಮಾಡಿದ ಸಾಲ ಮುಂದೆ ಸಾಮಾನ್ಯರ ಬದುಕಿನ ಹೊರೆಯಾಗುವ ಕಠೋರ ಸತ್ಯವನ್ನು ಹೊರ ಹಾಕುತ್ತಾರೆ.

**ಉಪಸಂಹಾರ**

ಒಂದು ಕಡೆ ಆತ್ಮಸಾಕ್ಷಿ, ಮತ್ತೊಂದು ಕಡೆ ಬದುಕು, ಇವರೆಡರ ಆಯ್ಕೆಯಲ್ಲಿ ಗೊಂದಲಮಯ ಸನ್ನಿವೇಶವನ್ನು ಎದುರಿಸಬೇಕಾಗಿರುವುದು ದೀನ–ದಲಿತರ ದುರಂತ. ಸಾಮಾಜಿಕ, ಆರ್ಥಿಕ, ಧಾರ್ಮಿಕ

ಹಾಗೂ ರಾಜಕೀಯ ವ್ಯವಸ್ಥೆಯ ವಿರುದ್ಧ ಹೋರಾಡಲು ಶಕ್ತಿಯೂ ಸಾಲದೇ, ಶೋಷಣೆಯನ್ನು ಸಹಿಸಿಕೊಳ್ಳಲು ಆಗದ ಸಂದಿಗ್ಧ ಪರಿಸ್ಥಿಯಲ್ಲಿ ಶೋಷಿತ ವರ್ಗ ಸಾಗುತ್ತಿದೆ. ಬಂಡಾಯ ಕಾವ್ಯ ದೇವರನ್ನು ತಿರಸ್ಕರಿಸುವ ಧಾರ್ಮಿಕ ಹಿನ್ನೆಲೆಯಲ್ಲಿ ಶೋಷಣೆಗೊಳಗಾದವರನ್ನು ಎಚ್ಚರಿಸುವ, ಶೋಷಕರನ್ನು ನಿಯಂತ್ರಿಸುವ, ತಮ್ಮ ಮೇಲಿರುವ ಜವಾಬ್ದಾರಿಯನ್ನು ಅರಿತು ಜಾಗೃತಿ ಮೂಡಿಸುವ, ಸಂಘಟನೆಗಳ ಮುಖಾಂತರ ಶೋಷಿತರಿಗೆ ಪ್ರಜ್ಞೆ ಮೂಡಿಸುವ ಕ್ರಿಯೆ ನಡೆದಿದೆ. ಆದರೂ ಕಾವ್ಯವೊಂದರಿಂದಲೇ ಪರಿವರ್ತನೆ ಸಾಧ್ಯವಿಲ್ಲ ಎನ್ನುವುದರ ಅರಿವು ಇರಬೇಕು. ಮನುಷ್ಯ ಸಹಜ ಬಯಕೆಗಳಾದ ಹಸಿವು, ನೀರಡಿಕೆ, ಲೈಂಗಿಕ ಪ್ರವೃತ್ತಿ ಪ್ರತಿಯೊಬ್ಬರನ್ನು ಕಾಡಿವೆ. ಎಲ್ಲರೂ ಮನುಷ್ಯರೇ ಎನ್ನುವ ಅರಿವು ಮೂಡಿದರೆ ವಿಶಾಲ ಮನಸ್ಥಿತಿ ಉಂಟಾಗುತ್ತದೆ. ಒಟ್ಟಾರೆ ಬಂಡಾಯ ದಲಿತ ಸಾಹಿತ್ಯ ಬಡವರ ಬದುಕಿಗೆ ಮೂಕ ವೇದನೆಗೆ ಸಂವೇದನೆಯಾಗಿ ಮೂಡಿ ಬಂದಿದೆ.

**ಕೊನೆಟಿಪ್ಪಣಿ**

1. ಬರಗೂರು ರಾಮಚಂದ್ರಪ್ಪ. (ಸಂ). (1990). ಬಂಡಾಯ ಕಾವ್ಯ. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು. ಪು.ಸಂ.1.
2. ಮೇಲಿನದೇ., ಪು.ಸಂ.38.
3. ಮೇಲಿನದೇ., ಪು.ಸಂ.41.
4. ಮೇಲಿನದೇ., ಪು.ಸಂ.41.
5. ಬಸವರಾಜ ಸಬರದ. ಬಂ.ಸಾ.ತಾ.ನೆಲೆಗಳು. ಪು.ಸಂ.42.
6. ಸಿದ್ದಲಿಂಗಯ್ಯ. (1985). ಹೊಲೆ ಮಾದಿಗರ ಹಾಡು. ಮೈತ್ರಿ ಪ್ರಕಾಶನ, ಬೆಂಗಳೂರು. ಪು.ಸಂ.10.
7. ಮೇಲಿನದೇ., ಪು.ಸಂ.13.
8. ಬರಗೂರು ರಾಮಚಂದ್ರಪ್ಪ. (ಸಂ). (1990). ಪೂರ್ವೋಕ್ತ. ಪು.ಸಂ.369.
9. ಮೂರ್ತಿಶ್ವರಯ್ಯ ಬೆ.ಕಾ. (ಸಂ). ಬಂಡಾಯದ ಬಿಸಿಯುಸಿರು. ಪಂಚಮ ಪ್ರಕಾಶನ, ಶಿರಾ.

**ಪರಾಮರ್ಶನ ಗ್ರಂಥಗಳು**


- ಬರಗೂರು ರಾಮಚಂದ್ರಪ್ಪ. (ಸಂ). (1990). ಬಂಡಾಯ ಕಾವ್ಯ. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.
- ಸಿದ್ದಲಿಂಗಯ್ಯ. (1985). ಹೊಲೆ ಮಾದಿಗರ ಹಾಡು. ಮೈತ್ರಿ ಪ್ರಕಾಶನ, ಬೆಂಗಳೂರು.
- ಮೂರ್ತಿಶ್ವರಯ್ಯ ಬೆ.ಕಾ. (ಸಂ). ಬಂಡಾಯದ ಬಿಸಿಯುಸಿರು. ಪಂಚಮ ಪ್ರಕಾಶನ, ಶಿರಾ.
- ಬಸವರಾಜ ಸಬರದ. ಬಂ.ಸಾ.ತಾ. ನೆಲೆಗಳು.
- ಚಂದ್ರಶೇಖರ ಪಾಟೀಲ. (1993). ಪ್ರಗತಿಶೀಲ ನವ್ಯ ದಲಿತ ಬಂಡಾಯ. ಸಂಕ್ರಮಣ ಪ್ರಕಾಶನ, ಧಾರವಾಡ.
- ಸಿದ್ದಯ್ಯ ಕೆ.ಬಿ. (ಸಂ). (1996). ದಲಿತ ಕಾವ್ಯ. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.